ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ
ನ್ಯಾಯಾಲಯ, ಮಡಿಕೇರಿ.

**ಸಿ. ಸಿ. ಸಂಖ್ಯೆಃ 2072/24**

ಪಿಡಬ್ಲ್ಯೂಃ - 1

<u>ದಿನಾಂಕಃ17.12.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಪಿ. ಹೆಚ್. ಟಿ. ವಕೀಲರಿಂದಃ-</u>

ನಾನು ಅಂಗನವಾಡಿಯಲ್ಲಿ ಸಹಾಯಕಿ ಆಗಿ ಕೆಲಸ ಮಾಡುತ್ತೇನೆ. ನನಗೆ ತಿಂಗಳಿಗೆ ರೂ.7,000/- ಸಂಬಳ ಬರುತ್ತದೆ. ನನ್ನ ಸಂಬಳದಿಂದಲ್ಲೇ ನಮ್ಮ ಸಂಸಾರ ನಡೆಯಬೇಕು ಎಂದರೆ ನನ್ನ ಗಂಡ ನಗರ ಸಭೆಯಲ್ಲಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ ಮತ್ತು ನನ್ನ ಎರಡು ಹೆಣ್ಣು ಮಕ್ಕಳು ಕೆಲಸಕ್ಕೆ ಹೋಗುತ್ತಾರೆ. ಗಿರೀಶ್ ಎನ್ನುವವರು ನನ್ನ ದೂರದ ಸಂಬಂಧಿ ಎಂದರೆ ಸರಿಯಲ್ಲ. ನಾನು ಗಿರೀಶ್ ಮತ್ತು ಜಗದೀಶ್(ಆರೋಪಿ) ರವರ ವಿರುದ್ಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೆ ಎಂದರೆ ಸರಿ. ಅವರ ವಿರುದ್ಧ ದಾಖಲಾದ ಕ್ರಿಮಿನಲ್ ಪ್ರಕರಣದ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಸದರಿ ಕ್ರಿಮಿನಲ್ ಪ್ರಕರಣದ ದೂರನ್ನು ನಾನೇ ಬರೆದು ಪೊಲೀಸರಿಗೆ ಕೊಟ್ಟಿದ್ದೇನೆ. ದೂರಿನಲ್ಲಿ ಹಣವನ್ನು ಗಿರೀಶ್ ನೇರವಾಗಿ ಹಣ ಕೊಟ್ಟಿದ್ದೇನೆ ಎಂದು ನಾನು ದೂರಿನಲ್ಲಿ ಬರೆದಿರುವುದಿಲ್ಲ.

2. ಗಿರೀಶನಿಗೆ ನಾನು ರೂ.18 ಲಕ್ಷ ಹಣವನ್ನು ಹಾಕಿರುತ್ತೇನೆ. ಸದರಿ ಹಣವನ್ನು ಹಾಕಿ ಎರಡು ವರ್ಷ ಆಗಿದೆ. ಆದ್ದರಿಂದ ಹಣ ಹಾಕಿದ ದಿನಾಂಕವನ್ನು ಹೇಳಲು ಆಗುವುದಿಲ್ಲ ಆದರೆ ಸ್ವಲ್ಪ ಸ್ವಲ್ಪ ಹಣವನ್ನು ಹಾಕಿರುತ್ತೇನೆ. ನಾನು ಈ ನ್ಯಾಯಾಲಯದಲ್ಲಿ ಒಟ್ಟು 5 ಪ್ರಕರಣಗಳನ್ನು ದಾಖಲಿಸಿದ್ದೇನೆ. ಅವುಗಳ ಪೈಕಿ ಒಂದು ಕ್ರಿಮಿನಲ್ ಪ್ರಕರಣ ಆಗಿದೆ. ನಾನು ದಾಖಲಿಸಿದ 5 ಪ್ರಕರಣ ಕ್ರಿಮಿನಲ್ ಸಂಖ್ಯೆಯನ್ನು ನನಗೆ ಹೇಳಲು ಆಗುವುದಿಲ್ಲ ಆದರೆ ನನ್ನ ವಕೀಲರಿಗೆ ಎಲ್ಲವನ್ನೂ ಹೇಳಿದ್ದೇನೆ. ನಾನು ಪ್ರತಿಯೊಂದು ಕ್ರಿಮಿನಲ್ ಪ್ರಕರಣವನ್ನು ಎಷ್ಟು ಹಣಕ್ಕೆ ಚೆಕ್ಕನ್ನು ಹಾಕಿದ್ದೇನೆ ಎಂದರೆ ರೂ.

3,50,000/-ಕ್ಕೆ ಎರಡು ಪ್ರಕರಣಗಳನ್ನು, ರೂ.2,50,000/-ಕ್ಕೆ ಎರಡು ಪ್ರಕರಣಗಳನ್ನು ಮತ್ತು ರೂ.2,00,000/- ಒಂದು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿದ್ದೇನೆ. ಆರೋಪಿಯು ರೂ.4 ಲಕ್ಷ ಹಣವನ್ನು ಗಿರೀಶ್ ನನಗೆ ಕೊಟ್ಟಿಲ್ಲ ಎಂದು ಪೊಲೀಸ್ ಠಾಣೆಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ರೂ.14 ಲಕ್ಷಕ್ಕೆ ಪ್ರಕರಣವನ್ನು ದಾಖಲಿಸಿದ್ದೇನೆ. ನಾನು ಗಿರೀಶ್ ಗೆ ಹಣ ಹಾಕಿದ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ ಆದರೆ ಬ್ಯಾಂಕ್ ಮೂಲಕ ಹಾಕಿದ್ದು ಅವುಗಳ ದಾಖಲೆಗಳನ್ನು ಪೊಲೀಸರು ತೆಗೆದಿದ್ದಾರೆ, ಇನ್ನೂ ಉಳಿದ ಹಣವನ್ನು ನಾನು ಗಿರೀಶ್ ಗೆ ನಗದಾಗಿ ಕೊಟ್ಟಿರುತ್ತೇನೆ.

3. ರೂ.4 ಲಕ್ಷ ಹಣಕ್ಕೆ ಆದ ವ್ಯವಹಾರದ ಮಾತುಕತೆ ಸಂಬಂಧ ಯಾವುದಾದರು ಬರವಣಿಗೆ ಆಗಿದೆಯಾ ಹಾಗೂ ಅದರ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಪೋಲೀಸ್ ಠಾಣೆಯಲ್ಲಿ ಗಿರೀಶ್ ಮತ್ತು ಆರೋಪಿ ಅದರ ಬಗ್ಗೆ ಮಾತುಕತೆ ಮಾಡಿದ್ದಾರೆ ಆದರೆ ನಾನು ಕೇವಲ ನನಗೆ ಕೊಡಬೇಕಾದ ರೂ.14 ಲಕ್ಷಕ್ಕೆ ಆರೋಪಿಯ ವಿರುದ್ಧ ಚೆಕ್ ಪ್ರಕರಣವನ್ನು ದಾಖಲಿಸಿದ್ದೇನೆ.

4. ಗಿರೀಶ್ ಗೆ ರೂ.18 ಲಕ್ಷ ಹಣವನ್ನು ಬ್ಯಾಂಕ್ ಮೂಲಕ ನೀಡಿದ್ದೇನೆ ಎಂದು ಹೇಳಿದ್ದೀರಾ ಯಾವ ಕಾರಣಕ್ಕೆ ಹಣವನ್ನು ನೀಡಿದ್ದೀರಾ ಎಂದರೆ ನಗದಾಗಿಯೂ ನೀಡಿದ್ದೇನೆ ಎಂದು ಸಾಕ್ಷಿ ಮುಂದುವರೆದು ಇನ್ ಕಮ್ ಟ್ಯಾಕ್ಸ್ ಡಿ ಒ ಆಗಿ ಕೆಲಸ ಇದೆ ಎಂದು ಹಾಗೂ ಅದನ್ನು ಕೊಡಿಸುವುದಾಗಿ ಹಣ ಕೇಳಿದ್ದರು. ನಾನು ಕೊಟ್ಟ ಹಣದ ಜೊತೆಗೆ ಇನ್ನೂ ಎರಡು ಲಕ್ಷ ಹಣ ಕೇಳಿದ್ದರು, ಅದರ ಬಗ್ಗೆ ನನ್ನ ಬಳಿ ದಾಖಲೆ ಇದೆ. ಗಿರೀಶ್ ರವರು ಕೆಲಸ ಕೊಡಿಸುತ್ತೇನೆ ಎಂದು ಹೇಳಿದ ದಿನ ನಾನು ಮೊದಲು 5 ಲಕ್ಷ, ಆನಂತರ ಎರಡು ಲಕ್ಷ, ಅದಾದ ನಂತರ ಸ್ವಲ್ಪ ಸ್ವಲ್ಪ ಹಣವನ್ನು ಕೊಟ್ಟಿರುತ್ತೇನೆ. 5 ಲಕ್ಷ ಹಣವನ್ನು ಎರಡು ಬಾರಿ ಕೊಟ್ಟಿರುತ್ತೇನೆ. ಹಣ ಕೊಟ್ಟ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ.

5. ಗಿರೀಶ್ ಮತ್ತು ಜಗದೀಶ್ ಅವರ ನಡುವೆ ವ್ಯವಹಾರ ಇತ್ತು ಎಂದರೆ ಸರಿ. ನನ್ನ ಮಗಳಿಗೆ ರೈಲ್ವೆ ಇಲಾಖೆಯಲ್ಲಿ, ಇನ್ ಕಮ್ ಟ್ಯಾಕ್ಸ್ ಇಲಾಖೆಯಲ್ಲಿ

ಎಂದು ಗಿರೀಶ್ ಹೇಳಿದ್ದರು. ಆರೋಪಿ ಇನ್ ಕಮ್ ಟ್ಯಾಕ್ಸ್ ಇಲಾಖೆಯಲ್ಲಿ ಕೆಲಸ ಇದೆ ಎಂದು ನಾನು ಕೊಟ್ಟ 18 ಲಕ್ಷದ ಜೊತೆಗೆ ಇನ್ನೂ ಎರಡು ಲಕ್ಷ ಕೊಡಿ ಎಂದು ಹೇಳಿದ್ದರು. ಸರ್ಕಾರಿ ಕೆಲಸ ಬೇಕಾದರೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದರೆ ಸರಿ. ನನ್ನ ಮಗಳ ಕೆಲಸಕ್ಕೆ ಎಂದು ನನ್ನ ಮಗಳ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದ ದಾಖಲೆಯನ್ನು ನ್ಯಾಯಾಲಯದ ಮುಂದೆ ನೀಡಿದ್ದೀರಾ ಎಂದರೆ ಅರ್ಜಿ ಸಲ್ಲಿಸಿ ಇಂಟರ್ವ್ಯೂವ್ ಗೂ ಸಹ ಮೈಸೂರಿಗೆ ಹೋಗಿ ಬಂದಿದ್ದಾಳೆ. ಆದರೆ ಸದರಿ ಅರ್ಜಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ, ಮಡಿಕೇರಿ.**